ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**

**ಫ್ರಾಸಾ- 8 ಚಾಸಾ- 14**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕುಮಾರಸ್ವಾಮಿ ಡಿ ಎನ್ |
| ತಂದೆಯ ಹೆಸರುಃ | : | ಲೇಟ್ ನಾಗರಾಜ |
| ವಯಸ್ಸುಃ | : | 55 ವರ್ಷ |
| ಉದ್ಯೋಗಃ | : | ಹೆಚ್ ಸಿ 318 |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:21-01-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 2017ರಿಂದ 2021 ರವರೆಗೆ ಹಳೇಬೀಡು ಪಿ ಎಸ್ ನಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ 9-1-20ರಂದು ನಾನು ನ್ಯಾಯಾಲಯದ ಕರ್ತವ್ಯದಲ್ಲಿದ್ದಾಗ ಚಾಸಾ-15 ರವರು ಕರೆ ಮಾಡಿ ಹಾಸನ ಸರ್ಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ಮಾಹಿತಿ ಬಂದಿದ್ದು ಅಲ್ಲಿಗೆ ಹೋಗಿ ಎಂ ಎಲ್ ಸಿ ಮಾಹಿತಿ ಪಡೆದುಕೊಂಡು ಗಾಯಾಳುವಿನ ಹೇಳಿಕೆಯನ್ನು ದಾಖಲಿಸಿಕೊಂಡು ಹಾಜರುಪಡಿಸುವಂತೆ ಸೂಚಿಸಿದರು. ಅದರಂತೆ ನಾನು ರಾತ್ರಿ 9-30 ಗಂಟೆಗೆ ಸದರಿ ಆಸ್ಪತ್ರೆಗೆ ಹೋದೆನು. ರಾತ್ರಿ 9-30 ಗಂಟೆಗೆ ಎಂ ಎಲ್ ಸಿ ಯನ್ನು ನಿಪಿ-8ರಂತೆ ಪಡೆದುಕೊಂಡೆನು. ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ರುಜು ಇದ್ದು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಗಾಯಾಳುವಿನ ಹೇಳಿಕೆಯನ್ನು 9-30 ರಿಂದ 10-30ರ ಸಮಯದಲ್ಲಿ ನಿಪಿ-1 ರಂತೆ ದಾಖಲಿಸಿಕೊಂಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ವಾಪಸ್ ಬಂದು ಚಾಸಾ-15ರವರ ಮುಂದೆ ಅದನ್ನು ಹಾಜರುಪಡಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಮಗೆ ಕರ್ತವ್ಯದ ಅವಧಿಯಲ್ಲಿ ಮಿತಿ ಇರುವುದಿಲ್ಲ. ಆ ದಿವಸ ನಾನು ನ್ಯಾಯಾಲಯದ ಕರ್ತವ್ಯ ಮುಗಿಸಿ 6 ಗಂಟೆಗೆ ನ್ಯಾಯಾಲಯದಿಂದ ಟಪಾಲುಗಳನ್ನು ಸ್ವೀಕರಿಸಿ ಸಂಬಂಧಪಟ್ಟ ಕಛೇರಿಗಳಿಗೆ ಅವುಗಳನ್ನು ಕೊಟ್ಟು ನಂತರ 9-30ಗಂಟೆಗೆ ಬಸ್ ನಿಲ್ದಾಣದಲ್ಲಿದ್ದಾಗ ಚಾಸಾ-15ರವರು ಕರೆ ಮಾಡಿ ಎಂ.ಎಲ್.ಸಿ ಮಾಹಿತಿ ಬಗ್ಗೆ ತಿಳಿಸಿದರು. ಆರ್ ಟಿ ಒ ಕಛೇರಿಗೆ ಟಪಾಲು ಕೊಡುವುದಿತ್ತು. ಅದು ಯಾವ ವಿಚಾರದ ಟಪಾಲು ಎಂದು ಈಗ ಹೇಳಲಾಗುವುದಿಲ್ಲ. ಎಸ್ ಪಿ ಕಛೇರಿಯಿಂದ ಬಸ್ ವಾರೆಂಟ್ ಗಳನ್ನು ಪಡೆದುಕೊಂಡು ನಂತರ ಬಸ್ ನಿಲ್ದಾಣಕ್ಕೆ ಬಂದಿದ್ದೆನು. ಆರ್ ಟಿ ಒ ಕಛೇರಿಯಲ್ಲಿ 6-30 ಗಂಟೆಗೆ ಟಪಾಲು ಸೆಕ್ಷನ್ ರವರು ಇದ್ದರು. ಬೆಂಗಳೂರಿನಿಂದ ಹಳೇಬೀಡಿಗೆ ಹೋಗುವ ಬಸ್ಸು 9-30 ಗಂಟೆಗೆ ನಿಲ್ದಾಣಕ್ಕೆ ಬಂದಿತ್ತು, ಅದನ್ನು ಹತ್ತುವ ಸಮಯದಲ್ಲಿ ಕರೆ ಬಂತು. ನನ್ನ ಜೊತೆ ಯಾರೂ ಇರಲಿಲ್ಲ. ನಾನೊಬ್ಬನೇ ಆಸ್ಪತ್ರೆಗೆ ಹೋದೆನು.

2.ಎಂ ಎಲ್ ಸಿ ರಿಜಿಸ್ಟರನ್ನು ನಾನು ನೋಡಲಿಲ್ಲ, ಮಾಹಿತಿ ಮಾತ್ರ ಸ್ವೀಕರಿಸಿರುತ್ತೇನೆ. ಎಂ ಎಲ್ ಸಿ ಮಾಹಿತಿಯಲ್ಲಿ ಹಲ್ಲೆಯ ಹಿನ್ನೆಲೆ ಏನು ಬರೆದಿದ್ದರೆಂದು ನಾನು ಗಮನಿಸಲಿಲ್ಲ. ನಿಪಿ-8ರಲ್ಲಿ 6 ಅಪರಿಚಿತ ವ್ಯಕ್ತಿಗಳೆಂದು ನಮೂದು ಮಾಡಿದ್ದಾರೆಂದರೆ ನಾನು ಗಮನಿಸಲಿಲ್ಲ. ಗಾಯಾಳು ಜನರಲ್ ವಾರ್ಡ್ ನಲ್ಲಿದ್ದರು. ಗಾಯಾಳುವಿನ ಜೊತೆ ಯಾರು ಯಾರು ಇದ್ದರೆಂದು ನಾನು ಗಮನಿಸಲಿಲ್ಲ. ಆತ ಹೇಳಿಕೆಕೊಡುವ ಸ್ಥಿತಿಯಲ್ಲಿದ್ದರು. ಆ ಸಮಯದಲ್ಲಿ ವೈದ್ಯರು ಅಲ್ಲಿ ಇದ್ದರು. ಸದರಿ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ವೈದ್ಯರ ಅನುಮತಿ ಪಡೆದು ಹೇಳಿಕೆ ಮಾಡಿಕೊಂಡಿರುತ್ತೇನೆ. ಆ ಬಗ್ಗೆ ನಿಪಿ-1 ರಲ್ಲಿ ನಮೂದು ಮಾಡಿಲ್ಲ. ವೈದ್ಯರ ಸಹಿಯನ್ನು ನಿಪಿ-1ಕ್ಕೆ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ನನಗೆ ಈ ಕೇಸಿನ ವಿಚಾರವಾಗಿ ಏನೂ ಗೊತ್ತಿಲ್ಲ ನಾನು ಹೇಳಿಕೆ ಪಡೆದುಕೊಂಡಿಲ್ಲ ಮೇಲಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಮಾಡಿಕೊಂಡಿಲ್ಲ, ಮೇಲಧಿಕಾರಿಗಳ ಮಾತುಕೇಳಿಕೊಂಡು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**